ತೆಂಗು ಅಭಿವೃದ್ಧಿ ಮಂಡಳಿಯವರಿಗೆ ಇದರ ಬಗ್ಗೆ ತಿಳಿಸಿದರೆ ಅವರು ಈ ಕೆಲಸ ಮಾಡುತ್ತಾರೆ. ಗುಬ್ಬಿ, ಚಿಕ್ಕನಾಯಕನಹಳ್ಳಿ, ತಿಪಟೂರು ತಾಲ್ಲೂಕುಗಳಲ್ಲಿ ಬಂದಿರುರ ಕಾಯಿಲೆಗಳ ಬಗ್ಗೆ ಇವೊತ್ತಿನವರೆವಿಗೂ ಯಾವುದೇ ಒಂದು ಕ್ರಮವನ್ನು ಸರ್ಕಾರ ಕೈಗೊಂಡಿಲ್ಲ. ತಿಪಟೂರು ಉಪ ವಿಭಾಗವೊಂದರಲ್ಲೇ ತೆಂಗು ಬೆಳೆಗೆ ಕಪ್ಪುತಲೆಹುಳು ಬಾಧೆಯಿಂದ ಸುಮಾರು 40 ಸಾವಿರಕ್ಕಿಂತಲೂ ಹೆಚ್ಚು ತೆಂಗಿನ ಸಸಿಗಳು ನಾಶವಾಗುತ್ತಿದೆ. ಮೈಸೂರಿನಲ್ಲೂ ತೆಂಗಿನ ಸಸಿ ಹಾಳಾಗುತ್ತಿದೆ. ದಕ್ಷಿಣ ಕನ್ನಡದಲ್ಲಿ ನಾಶವಾಗುವುದು ಕಡಿಮೆಯಾಗಿದೆ. ಇದಕ್ಕೆ ಬೇಕಾದಷ್ಟು ಮಳೆಯಾಗಿರುವುದೇ ಕಾರಣ. ಆದರೆ, ನಮ್ಮ ಭಾಗದಲ್ಲಿ ಮಳೆಯಿಲ್ಲದೆ ಕಪ್ಪು ತಲೆ ಹುಳುವಿನ ಬಾಧೆ ದಿನೇ ದಿನೇ ಉಲ್ಬಣಗೊಳ್ಳುತ್ತಿದೆ. ಇದಕ್ಕೇನಾದರೂ ಔಷಧಿ ಸಿಂಪಡಿಸಿ ರೋಗ ತಡೆಗಟ್ಟಿ ಎಂದು ಕೇಳಿದರೆ ಮಾಯಾ-ಮಂತ್ರ ಮಾಡುವುದಕ್ಕಾಗುತ್ತದೆಯೇ ಎಂದು ಹೇಳುತ್ತಿದ್ದೀರಿ?

ಶ್ರೀ ಎ. ಕೃಷ್ಣಪ್ಪ : ಹಣ ಪಾವತಿಯಾಗಿಲ್ಲವೆಂದು ಹೇಳುತ್ತಿದ್ದೀರಿ. ಇದಕ್ಕಾಗಿ ಆಯವ್ಯದಲ್ಲಿ 1.50 ಕೋಟಿ ರೂಪಾಯಿಗಳನ್ನು ಇಟ್ಟಿದ್ದು, ಹಣದ ಕೊರತೆ ಇದೆಯೆಂದು ಯಾವುದೇ ತಾಲ್ಲೂಕಿನಿಂದಲೂ ನಮಗೆ ವರದಿ ಬಂದಿಲ್ಲ. ಈ ಬಗ್ಗೆ ತಾವು ವಿವರಗಳನ್ನು ಕೊಟ್ಟರೆ ಮೂರು ದಿವಸದಲ್ಲಿ ಸೂಕ್ತ ಏರ್ಪಾಡು ಮಾಡುವ ಜವಾಬ್ದಾರಿ ಸರ್ಕಾರದ್ದಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಸಚಿವರು ಕೊಟ್ಟ ಉತ್ತರಿಂದ ನನಗೆ ತೃಪ್ತಿಯಾಗಿಲ್ಲ. ಸಚಿವರ ಬಗ್ಗೆ ವೈಯಕ್ತಿಕವಾಗಿ ದ್ವೇಷವೇನೂ ನನಗಿಲ್ಲ. ನಾನು ಪ್ರತಿ ಬಾರಿ ಅಧಿವೇಶನ ಸೇರಿದಾಗಲೂ ಇದರ ಬಗ್ಗೆ ಕೇಳುತ್ತಿದ್ದೇನೆ. ಕಪ್ಪುತಲೆ ಹುಳುವಿನ ಭೀಕರ ರೋಗದಿಂದ ರಾಜ್ಯಾದ್ಯಂತ ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗಿದೆ. ಮಾನ್ಯ ಸಚಿವರು ಸುಮ್ಮನೆ ಈ ರೀತಿ ಉತ್ತರ ಕೊಟ್ಟರೆ ನಾನು ಒಪ್ಪುವುದಿಲ್ಲ. ಸಚಿವರು ಕೊಟ್ಟ ಉತ್ತರದಲ್ಲಿ ನನಗಂತೂ ಪ್ರಾಮಾಣಿಕವಾದ ನಂಬಿಕೆ ಇಲ್ಲ. ಬಂದಿರುವ ರೋಗಕ್ಕೆ ಔಷಧಿ ಕೊಡುತ್ತೇವೆ, ನೋಡಿಕೊಳ್ಳುತ್ತೇವೆಂದು ಹೇಳುವುದು ಸರಿಯಲ್ಲ. ಇದು ರಾಜ್ಯದ ರೈತರಿಗೆ ಕೊಡತಕ್ಕಂಥ ಉತ್ತರವಲ್ಲ, ಭರವಸೆಯೂ ಅಲ್ಲ. ಆದುದರಿಂದ, ಸರ್ಕಾರದ ನೀತಿಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ರವರು ಈ ಹಂತದಲ್ಲಿ ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ಹೊರ ನಡೆದರು)

ಬೆಂಗಳೂರು ನಗರ ಜಿಲ್ಲಾ ಸರ್ಕಾರ ಬ್ಯಾಂಕಿನಿಂದ ಸಾಲ ಮಂಜೂರಾತಿ.

655 - ಶ್ರೀ ಕೆ. ಲಕ್ಷ್ಮಣ್ಣ (ರಾಜಾಜಿನಗರ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಬೆಂಗಳೂರು ನಗರ ಜಿಲ್ಲೆ ಸಹಕಾರ ಬ್ಯಾಂಕಿನಿಂದ ಯಾವ ಯಾವ ಬಾಬ್ತಿಗೆ ಸಾಲ ಕೊಡಲಾಗುತ್ತಿದೆ.

ಆ) ಪ್ರತಿಯೊಂದು ಬಾಬ್ತಿನಲ್ಲಿ ಎಷ್ಟು ಎಷ್ಟು ಸಾಲವನ್ನು 1993-94ನೇ ಸಾಲಿನಲ್ಲಿ ಕೊಡಲಾಗಿದೆ.

ಇ) ಪ್ರತಿಯೊಂದು ಬಾಬ್ತಿನಲ್ಲೂ ವಸೂಲಿ ಮಾಡಿರುವುದು ಎಷ್ಟು ಹಾಗೂ ಸುಸ್ತಿ ಹಣವೆಷ್ಟು?

ಈ) ಸದರಿ ಬ್ಯಾಂಕಿನಿಂದ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಸಾಲ ಕೊಟ್ಟಿದ್ದಾರೆಯೇ ಹಾಗೂ ಕೊಟ್ಟಿರುವ ಹಣವೆಷ್ಟು

ಉ) ಈಗಲೂ ಸದರಿ ಸಹಕಾರ ಸಂಘಗಳಿಗೆ ಸಾಲ ಕೊಡುತ್ತಿದ್ದಾರೆಯೇ

ಊ) 1994 ನೇ ಜೂನ್ 30 ರಂದು ಸದರಿ ಬ್ಯಾಂಕಿನ ವಿಶೇಷ ಅಧಿಕಾರಿಗಳು ಪತ್ರಿಕೆ ಪ್ರಕಟಣೆ ಕೊಟ್ಟಿರುವುದು ಸರಿಯಾಗಿದೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಸಹಕಾರ ಸಚಿವರು)